ಮಣಿಕಂಠ ಗೊದಮನಿ ಹಾವೇರಿಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದಲ್ಲಿ ಬಿ.ಎ ದ್ವಿತೀಯ ವರ್ಷದ ವಿದ್ಯಾರ್ಥಿ. ಓದು, ಬರವಣಿಗೆಯಲ್ಲಿ ವಿಶೇಷ ಪ್ರೀತಿ. 'ಉರಿದೊಡಲ ಬೇಗೆ' ಅವರ ಪ್ರಕಟಿತ ಕವನ ಸಂಕಲನ.

ನಾನು ಮಾತ್ರ ಎಲ್ಲರ ಮಾತುಗಳನ್ನು ಸುಮ್ಮನೇ ಕೇಳುತ್ತಾ ನಿಂತುಬಿಟ್ಟೆ. ಈ ಗದ್ದಲ ನನ್ನ ಮೂಲ ಕೆಲಸವನ್ನೂ ಮರೆಸಿತ್ತು. ತಡವಾದರೂ ಚಿಂತೆಯಿಲ್ಲ. ಇವತ್ತು ನಾನು ಅಂದುಕೊಂಡಲ್ಲಿ ಹೋಗದಿದ್ದರೂ ಅಷ್ಟೇ, ಈ ರಹಸ್ಯವನ್ನು ತಿಳಿದೇ ಹೋಗಬೇಕೆಂದು ತೀರ್ಮಾನಿಸಿದೆ.

ಹೀಗೆ ಇಲ್ಲಿತನಕ ಮೆಲುಧ್ವನಿಯಲ್ಲಿ ಪಿಸುಗುಡುತ್ತಿದ್ದ ಜನರೀಗ ಜೋರು ಬಾಯಲ್ಲಿ ತಲೆಗೊಂದರಂತೆ ಕಾರಣ ಕಲ್ಪಿಸಿಕೊಳ್ಳುತ್ತಾ ಹೋದರು. ಕೆಲವರು ಆ ಹುಡುಗನ ವಿರುದ್ಧ ಕಿಡಿಹಾಯ್ದರು. ಕೆಲವರು ಹುಚ್ಚನ ಪಟ್ಟ ಕಟ್ಟಿದರೆ, ಮತ್ತೆ ಕೆಲವರು ಮುಗ್ಧನೆಂದೂ ಸಮಜಾಯಿಷಿ ಕೊಟ್ಟರು. ಇದ್ದಕ್ಕಿದ್ದಂತೆ ಗುಂಪಿನ ಮಧ್ಯದಲ್ಲೊಂದು ಜೋರಾದ ಧ್ವನಿ 'ತಡೀರಿ, ಹೀಗ್ಯಾಕ್ ಏನೂ ಗೊತ್ತಿಲ್ದೇ ಗಂಟ್ಲು ಹರ್ಕೋತೀರಿ. ಅವ ಬೇರೆ ಯಾರೂ ಅಲ್ಲ. ಮೊನ್ನೆ ಸುಸೈಡ್ ಮಾಡ್ಕೊಂಡು ಸತ್ತಿರೋ ಹಾರಪ್ಪನ ಸಣ್ಣ ಮಗ ಮುನಿಯ'. ಒಂದು ಕ್ಷಣ ಎಲ್ಲರೂ ಅವಾಕ್ಕಾದರು. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ನನಗೆ ಏನೂ ತಿಳಿಯಲಿಲ್ಲ. ಹಾರಪ್ಪ ಎಲ್ಲರಿಗೂ ಪರಿಚಿತನಿರಬಹುದು ಎಂದು ಮಾತ್ರ ಅನ್ನಿಸಿತು. ಆ ವ್ಯಕ್ತಿ ಮತ್ತೆ ಮಾತು ಮುಂದುವರೆಸಿದ. 'ಅವ್ನೀಗ ದೂರದ್ ಊರಿನ ಹಾಸ್ಟೆಲ್‌ನಲ್ಲಿ ಇದ್ಕೊಂಡು ಏಳನೇ ಕ್ಲಾಸು ಓದ್ತಿದ್ದ. ಅವನಿಗೆ ಸಾವಿನ ಸುದ್ದಿ ಗೊತ್ತಾಗಿದ್ದು ಮೊನ್ನೆ ಮೊನ್ನೆ. ಈಗ ಅವ್ನು ಅನಾಥ. ಸಣ್ಣ ವಯಸ್ನೊಳಗೇ ಊರು ಬಿಟ್ಟು ಹೋಗಿರೋ ಅವಂಗೆ ಇಲ್ಲಿ ಯಾರ ಪರಿಚಯಾನೂ ಇಲ್ಲ, ಅವನೂ ಇಲ್ಲಿ ಯಾರಿಗೂ ಗೊತ್ತಿಲ್ಲ. ಆದ್ರೆ ಅವ್ನು ಚಿಕ್ಕವ್ನಿದ್ದಾಗ ನಾನು ಅವಂಗೆ ಪಾಠ ಮಾಡಿದೀನಿ. ನಂಗೆ ಅವ್ನು ಗೊತ್ತು. ಅವಂಗೂ ನಾನು ಗೊತ್ತು. ಇವತ್ತು ಬೆಳಗ್ಗೆ ಬಂದು ನನ್ನ ಜೋಡಿ ಮಾತಾಡಿ ಹೋಗಿದ್ದ. ಅವ್ನನ್ನ ನೆನಸ್ಕೊಂಡ್ರೆ ಪಾಪ ಅನ್ಸುತ್ತೆ' ಗಂಭೀರವಾಗಿ ಮಾತು ಪ್ರಾರಂಭಿಸಿದ್ದ ವ್ಯಕ್ತಿ ಕ್ರಮೇಣವಾಗಿ ಭಾವುಕರಾದರು. ಅವರ ಮಾತಿನಿಂದ ಅವರೊಬ್ಬ ಮೇಷ್ಟ್ರು ಎಂಬುದು ನನಗೆ ಖಚಿತವಾಯಿತು. ಆದರೆ ತನ್ನ ಅಪ್ಪ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಆ ಹುಡುಗ ಜೋಡು ಚಪ್ಪಲಿಗಳನ್ನು ಈ ಭಂಗಿಯಲ್ಲಿ ನೇತು ಹಾಕುವುದಕ್ಕೂ, ಅಲ್ಲಲ್ಲ; ನೇಣು ಹಾಕುವುದಕ್ಕೂ ಏನು ಸಂಬಂಧವೆಂದು ನನಗೆ ತಿಳಿಯಲಿಲ್ಲ. ನೇರವಾಗಿ ಈ ಪ್ರಶ್ನೆಯನ್ನು ಅವರಲ್ಲೇ ಕೇಳಿದೆ. ಅದಕ್ಕವರು ನಾನು ಊಹಿಸಲೂ ಸಾಧ್ಯವಾಗದಂಥ ದೊಡ್ಡ ದುರಂತದ ಕಥೆಯನ್ನೇ ಹೇಳಿದರು. 'ದುಪಟ್ಟಾ, ಜೋಡು ಚಪ್ಪಲಿ, ಹುಡುಗ' ಈ ಮೂರಕ್ಕೂ ಒಂದೊಂದು ಕಥೆಗಳಿದ್ದವು. ಅವರು ಹೇಳಿದ್ದನ್ನು ನನ್ನ ಮಾತುಗಳಲ್ಲಿ ನಿಮಗೆ ಹೇಳುತ್ತೇನೆ:

ಅದೊಂದು ಊರು. ಆದರೆ ಸತಿಪುರ ಅಲ್ಲ. ಅದಕ್ಕೆ ಅಂಟಿಕೊಂಡೇ ಇದ್ದ ಊರು. ಊರೆಂದರೆ ಊರೂ ಅಲ್ಲ. ಒಂದು ಕೊಂಪೆ. ಕೊಂಪೆಯೆಂದರೆ ಸಣ್ಣ ಕೊಂಪೆ. ಸತಿಪುರದ ಹೊರಕೇರಿಯಲ್ಲಿ ಸ್ಥಾನ ಪಡೆದಿರುವಂಥದ್ದು. ಅಲ್ಲಿ ಹೆಚ್ಚೆಂದರೆ ಎಂಟ್ಹತ್ತು ಮನೆಗಳು ಮಾತ್ರ ನೆಲೆಸಿವೆ. ಮನೆಗಳೆಂದರೆ ಮನೆಗಳೇನಲ್ಲ. ಚಂದನೆಯ ಹೆಂಚಿನ ಹಾಸೂ ಇಲ್ಲದೆ, ಸುಣ್ಣವಾಗಲಿ ಬಣ್ಣವಾಗಲಿ, ಚಿತ್ತಾರಗಳಾಗಲಿ ಇತರೆ ಯಾವುದೇ ಅಲಂಕಾರದ ಗೊಡವೆಗಳಿಲ್ಲದೆ ತಣ್ಣಗೆ ಶಾಂತವಾಗಿ ನೆಲೆಸಿರುವ ಗುಡಿಸಲುಗಳವು. ಅವುಗಳ ಮೇಲೆ ಸಿಮೆಂಟಿನ ಮೂರಾಬಟ್ಟೆ ತಗಡುಗಳನ್ನು ಮಾತ್ರ ಭದ್ರವಾಗಿ ಮುಚ್ಚಲಾಗಿದೆ. ಈಗ ನಿಮ್ಮ ಕಲ್ಪನೆಗೊಂದು ಚಿತ್ರ ಮೂಡಬಹುದು. ಆ ಗುಡಿಸಲುಗಳಲ್ಲಿನ ಜನರು ಯಾರೆಂದು ನೀವು ಈಗಾಗಲೇ ಊಹಿಸಿರಲೂಬಹುದು. ಹೌದು, ಅವರು ಅವರೇ! ಸತಿಪುರಕ್ಕೆ ಭಾರವಾಗಿ ಹೊರಕೇರಿಯಲ್ಲಿ ನೆಲೆಸಿರುವ ಹೊಲೆಯರು. ಈ ಮುಂಚೆ ಅವರೆಲ್ಲ ಸಮಾಜದ ನಿಕೃಷ್ಟ ಕೆಲಸಗಳೆನ್ನುವಂಥವುಗಳನ್ನು ಮಾತ್ರ ಮಾಡುತ್ತಾ ಬದುಕಬೇಕಿತ್ತು. ಈಗೀಗ ಕಾನೂನು ಕಟ್ಟಳೆಗಳು ಬಿಗಿಯಾದ್ದರಿಂದ